ಶ್ರೀ ಕೆ. ಬಿ. ಶಾಣಪ್ಪ.—ಇದು ಒಂದು ವರ್ಷದ್ದು ಆಯಿತು. ನಾವು ಸುಮಾರು ೧೯೮೪-೮೫ರಲ್ಲಿ. ಕೋರ್ಟ್ ಮುಂದೆ ಹೋಗಿ ಸ್ಟೇ ವಾಪಸ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆವು ಸುಮಾರು ಮೂರು ವರ್ಷವಾಯಿತು. ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಮುಂಚಿತವಾಗಿಯೇ ಸಿ.ಐ. ಪೈಪ್‌ಗಳನ್ನು ಖರೀದಿ ಮಾಡಿ ಇಡುವಂತಹ ನೆಸೆಸಿಟಿ ಏನು ಇತ್ತು ? ಪ್ರಾಜೆಕ್ಟ್ ಕೈಗೆ ಬರದೇ ಅಧಿಕಾರಿಗಳು ಇದನ್ನು ಖರೀದಿ ಮಾಡುವಂತಹ ಪ್ರಮೇಯಂವೇನು ಇತ್ತು ? ಇದನ್ನು ಖರೀದಿ ಮಾಡುವುದಕ್ಕೆ ಕಾರಣವೇನು ? Why they have purchased ? If they have gone out of the way are you prepared to take action against those who have purchased the cast iron pipes without construction of the project ?

ಶ್ರೀ ಎಂ ಚಂದ್ರಶೇಖರ್.—ಇದು ನಮಗೆ ಅನುಭವವಾಗಿದೆ. ಸಿ.ಐ. ಪೈಪ್ ಸಪ್ಲೈ ಈಗ ಅಷ್ಟು ಸುಲಭವಾಗಿಲ್ಲ. ನೀರು ಸರಬರಾಜು ಮಂಡಲಿಯಲ್ಲಿ ೪-೫ ವರ್ಷಗಳ ಹಿಂದೆ ಹಾಕಿರುವಂತಹ ಆರ್ಡರ್ಸ್‌ಗಳಿಗೆ ಇವತ್ತಿಗೂ ಸಿಗುತ್ತಿಲ್ಲ. ಯಾವತ್ತು ಈ ಪೈಪ್‌ಗಳು ಸಿಗುತ್ತದೋ ಆವತ್ತು ಇದನ್ನು ತೆಗೆದಿಟ್ಟುಕೊಳ್ಳಬೇಕು. ಅದು ಏನೂ ಕರಗುವುದಿಲ್ಲ. ಜಾಕ್‌ವೆಲ್ ಕೆಲಸ, ರಿಸರ್ವಾಯರ್ ಕೆಲಸ ಬೇಗ ಆಗುತ್ತದೆಂದು ಆ ಕೆಲಸವನ್ನು ಆದಷ್ಟು ಬೇಗ ಮುಗಿಸೋಣವೆಂದು ಖರೀದಿ ಮಾಡಿಟ್ಟಿದ್ದಾರೆ. ಸಾಮಗ್ರಿಗಳನ್ನು ಬೇಗ ತೆಗೆದುಕೊಂಡರೆ ಆ ಕೆಲಸ ಆದಷ್ಟು ಬೇಗ ಪೂರ್ಣವಾಗುತ್ತದೆ ಮತ್ತು ಆಸ್ತಿ ಜೆಲೆ ಕೂಡ ಕಡಿಮೆಯಿರುತ್ತದೆ.

ಶ್ರೀ ಕೆ. ಬಿ. ಶಾಣಪ್ಪ.—೧೧ ಲಕ್ಷ ರೂಪಾಯಿ ಬಡ್ಡಿಯನ್ನು...

(ಗೊಂದಲ)

ಅಧ್ಯಕ್ಷರು.—ನಾನು ಅವಕಾಶ ಕೊಡುವುದಿಲ್ಲ ನಿಮಗೆ ಮೂರು ಸಾರಿ ಅವಕಾಶ ಕೊಟ್ಟಿದ್ದೇನೆ, ನೀವು ಕುಳಿತುಕೊಳ್ಳಿ. ಪ್ರಶ್ನೋತ್ತರ ವೇಳೆ ಮುಗಿದಿದೆ. ಬಾಕಿ ಇರುವ ಎಲ್ಲ ಕ್ವೆಶ್ಚನ್ ಅನ್ನೂ ಲ್ಯಾಪ್ಸ್ ಮಾಡುತ್ತೇನೆ. ನಿಮಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಮಾನ್ಯ ಖರ್ಗೆಯವರೇ ತಾವು ಕೇಳಿ.

ಶ್ರೀ ಕೆ. ಬಿ. ಶಾಣಪ್ಪ.—ಮುನಿಸಿಪಾಲಿಟಿಯವರು ೧೧ ಲಕ್ಷ ರೂಪಾಯಿ ಬಡ್ಡಿಯನ್ನು ಏಕೆ ಕೊಡಬೇಕು ? ಸರಕಾರದಿಂದ ಉತ್ತರ ಕೊಡಬೇಕು.

ಅಧ್ಯಕ್ಷರು.—ಅವಕಾಶ ಕೊಡುವುದಕ್ಕಾಗುವುದಿಲ್ಲ ತಾವು ಮಾನ್ಯ ಸಚಿವರು ಪಕ್ಕದಲ್ಲಿ ಕುಳಿತು ಕೊಂಡು ಕೇಳಿ. ಬೇಕಾದರೆ ಹಾಫ್ ಆನ್ ಅವರ್ ಡಿಸ್‌ಕಷನ್‌ಗೆ ಹಾಕಿ.

Misuse of funds in Yadgir Division of Gulbarga Zilla Parishad

1829. Sri Mallikarjuna M. Kharge Gurmitkal.—Will the Minister for Rural Development and Panchayateraj will be pleased to state

a) Whether it has come to the notice of the Government that the Yadgir Division of Gulbarga Zilla Parishad has misused the released amount for various Developmental works in the Taluk;

b) If so the action taken by the Government to set right the mis-use and misapplication of funds in the said Divison particularly in Yadgir Sub-Division.

SRI ABDUL NAZEER SAB. (Rural Development and Panchayat raj)—

a) No.

b) Does not arise

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ನಾನು ಕೇಳಿದ್ದುದು ಏನೆಂದರೆ

a) Whether it has come to notice of the Government that the Yadgir Division of Gulbarga Zilla Parishad has misused the released amount for various Developmental works in the taluk. For this.

'ನೊ' ಎಂದು ಹೇಳಿದ್ದಾರೆ. (b) If so the action taken by the Government to set Right the misuse and mis-opplication of funds in the said Division. particularly in Yadgir Sub-Division. For this the reply is "does not arise" ಎಂದು ಹೇಳಿದ್ದಾರೆ ನಾನು ಖುದ್ದಾಗಿ ಅಲ್ಲಿ ನಡೆದಿದ್ದನ್ನು ನೋಡಿಕೊಂಡು ಒಂದು ಲೆಟರನ್ನು ಸರ್ಕಾರಕ್ಕೆ ಕೂಡಾ ಬರೆದೆ. ಮತ್ತು ಉಪಲೋಕಾಯುಕ್ತಕ್ಕೆ ಎರಡು ಟೆಲಿಗ್ರಾಂನ್ನು ಕೂಡಾ ಕಳುಹಿಸಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಪರ್ಟಿಕ್ಯುಲರ್ಲಿ ಇನ್ ದಿ ಮಂತ್ ಆಫ್ ಫೆಬ್ರುವರಿ, ಮಾರ್ಚ್ ಇದು ಸುಗ್ಗಿ ಟೈಮ್ ಅವರಿಗೆ, ರೈತರಿಗೆ ಹೇಗೆ ಸುಗ್ಗಿ ಇರುತ್ತದೋ ಆದೇರೀತಿ ಅವರಿಗೆ ಜಿಲ್ಲಾ ಪರಿಷತ್‌ನಲ್ಲಾಗಲೀ ಅಥವಾ ಪಿ. ಡಬ್ಲ್ಯೂ. ಡಿ. ಯಲ್ಲಾಗಲೀ ಜನವರಿ, ಫೆಬ್ರುವರಿ ಮಾರ್ಚ್ ಈ ಮೂರು ತಿಂಗಳು ಸಿಕ್ಕಾಪಟ್ಟೆ ಫಾಲ್ಸ್ ಬಿಲ್ಲನ್ನು ಕ್ರಿಯೇಟ್ ಮಾಡುವುದು ಅಮೌಂಟನ್ನು ಡ್ರಾ ಮಾಡುವುದು, ಅದನ್ನು ಹಂಚಿಕೊಂಡು ಬಿಡುವುದು, ಇಂಥಾದ್ದು ನಡೆಯುತ್ತದೆ. ತಮಗೆ ಗೊತ್ತಿರುವ ಹಾಗೆ ಎನ್ ಆರ್.ಇ.ಪಿ. ಮತ್ತು ಆರ್. ಎಲ್. ಇ. ಜಿ. ಪಿ. ಇಂಥ ಕಾರ್ಯಕ್ರಮಗಳು ಏನು ಇವೆ. ಅದನ್ನು ನೇರವಾಗಿ ಡಿಪಾರ್ಟ್‌ಮೆಂಟ್‌ನವರೇ ಮಾಡಬೇಕು ಎಂದು ಇದೆ, ಆದರೆ ಅದನ್ನು ಅವರು ಮಾಡುವುದಿಲ್ಲ. ಅದನ್ನು ಏನು ಮಾಡುತ್ತಾರೆ ಎಂದರೆ ಟರ್ನ್‌ಓವರ್ ಕೆಲಸವನ್ನು ಜಾಸ್ತಿ ತೋರಿಸಬೇಕು ಎಂದು ಹೇಳಿ ಪ್ರೈವೇಟ್ ಕಂಟ್ರಾಕ್ಟರ್‌ಗಳಿಗೆ ಅದನ್ನು ಕೊಟ್ಟು ಮಾಡಿಸಿ ಬಿಲ್ಲನ್ನು ಡ್ರಾ ಮಾಡುತ್ತಾರೆ, ಅದನ್ನು ಡಿಪಾರ್ಟ್‌ಮೆಂಟ್‌ನವರು ಮಾಡಿದಂತೆ ಮಾಡುತ್ತಾರೆ. ಅವರೂ ಇವರೂ ಹಣವನ್ನು ಹಂಚಿಕೊಂಡುಬಿಡುತ್ತಾರೆ. ಇದು ನನ್ನ ನೋಟೀಸ್‌ಗೆ ಬಂದಮೇಲೆ ಟೆಲಿಗ್ರಾಂನ್ನು ಉಪಲೋಕಾಯುಕ್ತಕ್ಕೆ ಕೊಟ್ಟಿರುತ್ತೇನೆ. ಇದರ ಬಗ್ಗೆ ಮಾನ್ಯ ನಜೀರ್ ಸಾಹೇಬ್‌ರವರಿಗೂ ಕೂಡಾ ಒಂದು ಲೆಟರನ್ನು ಬರೆದೆ, ಆದರೂ ಇದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತಿರುವುದು ಆಶ್ಚರ್ಯ. ಕನಿಷ್ಪಪಕ್ಷ ನಾನು ಪ್ರಶ್ನೆಯನ್ನು ಹಾಕಿದಮೇಲಾದರೂ ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆ? ಈಗಲಾದರೂ ತಾವು ಎಷ್ಟು ಅಮೌಂಟನ್ನು ಆ ಡಿವಿಜನ್‌ನಲ್ಲಿ ರಿಲೀಸ್ ಮಾಡಿದ್ದೀರಿ, ಯಾವ ಯಾವ ಕೆಲಸವನ್ನು ತೆಗೆದುಕೊಂಡಿದ್ದೀರಿ ಎನ್ನುವುದರ ಬಗ್ಗೆ ಡೀ ಲ್ಡ್ ಎನ್‌ಕ್ವೈರಿಯನ್ನು ಮಾಡಿಸುತ್ತೀರಾ? ಇದರ ಬಗ್ಗೆ ಸಂಬಂಧಪಟ್ಟ ಉಪಲೋಕಾಯುಕ್ತರಿಂದಾಗಲೀ ಅಥವಾ ಡೆಪ್ಯುಟಿ ಕಮಿಷನರ್‌ರವರಿಂದಾಗಲಿ ಎನ್‌ಕ್ವೈರಿಯನ್ನು ಮಾಡಿಸುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಈಗ ಶ್ರೀಮಾನ್ ಖರ್ಗೆಯವರು ನೇರವಾಗಿ ಪತ್ರವನ್ನು ಅಬ್ದುಲ್ ನಜೀರ್‌ಸಾಬ್‌ರವರಿಗೆ ಬರೆದು ಎರಡು ತಂತಿಗಳನ್ನು ಕೂಡಾ ಕೊಟ್ಟಿದ್ದಾರೆ ಎನ್ನುವ ಮಾತನ್ನು ಹೇಳಿರುವುದರಿಂದ ಆಕಸ್ಮಾತ್ ಈ ಪ್ರಶ್ನೆಗೆ ಉತ್ತರ ಏನೇ ಇರಲಿ, ಇಲ್ಲಿ ಹಣದ ದುರುಪಯೋಗ ಆಗಿರತಕ್ಕಂಥದ್ದು ಬಹಳ ಗುರುತರವಾದಂಥದ್ದು. ಆದ್ದರಿಂದ ಇದರ ಬಗ್ಗೆ ಈ ದಿವಸವೇ ಗ್ರಾಮೀಣಾಭಿವೃದ್ಧಿ ಕಾರ್ಯದರ್ಶಿಯವರ ಜೊತೆ ಮಾತನಾಡಿ ಸಂಬಂಧಪಟ್ಟ ಪತ್ರ ಮತ್ತು ತಂತಿಗಳನ್ನು ತೆಗೆದುಕೊಂಡು ಅದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಂಡು ಅದರ ವರದಿಯನ್ನೂ ಕೂಡಾ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರಿಗೆ ಕಳುಹಿಸಿಕೊಡಬೇಕು ಎಂದು ಆದೇಶವನ್ನು ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದನ್ನು ಏನ್‌ಕ್ವೈರಿ ಮಾಡಿಸುತ್ತೇನೆ ಎಂದು ಹೇಳಿದಿರಿ ಯಾರ ಮುಖಾಂತರ ಮಾಡಿಸುತ್ತೀರಿ ಎಂದು ಹೇಳಲಿಲ್ಲ. ಇದನ್ನು ತಾವು ತಕ್ಷಣ ಮಾಡದೇ

ಹೋದರೆ ಇದು ಕಂಟಿನ್ಯೂ ಆಗುತ್ತದೆ. ನಮ್ಮ ಪ್ರಧಾನರುಗಳಿಂದ ಹಿಡಿದುಕೊಂಡು ಜಿಲ್ಲಾ ಪರಿಷತ್ತಿನ ಮೆಂಬರ್ಸ್, ಪುಢಾರಿಗಳು, ಲೀಡರ್ಸ್‌ಗಳು ಎಲ್ಲರೂ ಕೂಡ ಇನ್‌ವಾಲ್ವ್ ಆಗಿದ್ದಾರೆ. ಅಲ್ಲಿ ಯಾರು ಅಸಿಸ್ಟೆಂಟ್ ಇಂಜಿನಿಯರ್, ಜೂನಿಯರ್ ಇಂಜಿನಿಯರ್ ಯಾರು ಚೆನ್ನಾಗಿ ಇರುತ್ತಾರೆ, ಅವರ ಜೊತೆಯಲ್ಲಿ ಅಡ್ಜಸ್ಟ್ ಮಾಡಿಕೊಂಡು ವ್ಯವಹಾರವನ್ನು ಮಾಡುತ್ತಿದ್ದಾರೆ. ಅಲ್ಲಿ ರಸ್ತೆ ಇರುವುದಿಲ್ಲ ಬ್ಯಾಂಕ್ ರಿಪೇರಿ ಆಗುವುದಿಲ್ಲ ಡಿಸಿಲ್ಟಿಂಗ್ ಆಗುವುದಿಲ್ಲ, ಇದನ್ನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ನಿಜವಾಗಿ ನೋಡಿದರೆ ಇಂತಹ ಸಣ್ಣ ವಿಷಯಗಳನ್ನು ಅಸೆಂಬ್ಲಿಯಲ್ಲಿ ತರಬಾರದಂತ. ಇದು ತಮ್ಮ ಗಮನಕ್ಕೆ ಬಂದಿದೆ ಎಂದು ತಿಳಿದುಕೊಂಡಿದ್ದೆ. ಬಂದಿಲ್ಲ ಎಂಬ ಕಾರಣಕ್ಕಾಗಿ ಈ ಪ್ರಶ್ನೆಯನ್ನು ಹಾಕಬೇಕಾಗಿ ಬಂತು ಈ ಎನ್‌ಕ್ವೈರಿಯನ್ನು ಯಾರ ಮುಖಾಂತರ ಮಾಡಿಸುತ್ತೀರಿ? ಎಷ್ಟು ದಿವಸದಲ್ಲಿ ಇದನ್ನು ಮಾಡಿಸುತ್ತೀರಿ. ಅದನ್ನು ಈ ಸದನದ ಗಮನಕ್ಕೆ ತರುತ್ತೀರಾ ಎಂದು ನಾನು ತಮ್ಮಲ್ಲಿ ಕೇಳಬಯಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಸಭಾಧ್ಯಕ್ಷರೇ, ಶ್ರೀಮಾನ್ ನಜೀರ್‌ಸಾಬ್‌ರವರು ಇಲ್ಲದೇ ಇರುವುದರಿಂದ ಆಶ್ವಾಸನೆಯನ್ನು ಕೊಡುವಂಥ ಪರಿಸ್ಥಿತಿಯಲ್ಲಿಲ್ಲ. ಆದರೂ ಕೂಡಾ ಇದರ ಬಗ್ಗೆ ಕಾರ್ಯದರ್ಶಿಯವರ ಜೊತೆಯಲ್ಲಿ ನಾನು ಮಾತನಾಡಿ ಪ್ರಾಯಶಃ ವಿಭಾಗಾಧಿಕಾರಿಗಳು ಮಂತ್ರಿ ಮಂಖ್ಯೆ ಕಾರ್ಯದರ್ಶಿಗಳ ಜೊತೆಯಲ್ಲಿ ನೇರವಾಗಿ ವಿಚಾರ ಮಾಡಿ ವರದಿಯನ್ನು ಆದಷ್ಟು ಶೀಘ್ರವಾಗಿ ೧೫ ದಿವಸ ಅಥವಾ ಒಂದು ತಿಂಗಳಲ್ಲಿ ಬರುವಂತೆ ಮಾಡಿ ನಿಮಗೆ ಉತ್ತರವನ್ನು ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಕೆ, ಕೆ. ರವೀಂದ್ರನಾಥ ಬಾಬು.—ಮಾನ್ಯ ಅಧ್ಯಕ್ಷರೇ, ಡಿಸ್ಟ್ರಿಬ್ಯೂಷನ್ ಆಫ್ ಹೌಸ್ ಏನು ಮಾಡುತ್ತಿದ್ದೀರಿ. ಅಲಾಟ್‌ಮೆಂಟ್ ಆಫ್ ಹೌಸ್ ಅಟ್‌ಲೀಸ್ಟ್ ಒಂದೊಂದು ಮಂಡಲಕ್ಕೆ ಒಂದೊಂದು ಹಳ್ಳಿಗೆ ಒಂದೊಂದು ಮನೆ ಇರತಕ್ಕ ಹಾಗೆ ಮಾಡಬೇಕು. ಈಗ ಮಂಡಲ್ ಪಂಚಾಯತ್ ಮಾಡಿ ಒಂದೊಂದು ಹಳ್ಳಿಗೆ ಒಂದೊಂದು ಮನೆ ಇಲ್ಲದ ಹಾಗೆ ಮಾಡಿದ್ದೀರಿ. ೪-೫ ಮನೆಗಳನ್ನು ಕೊಟ್ಟರೆ ಅಲ್ಲಿಯ ಮೆಂಬರ್‌ಗಳು ಡಿಫರೆಂಟ್ ಪೊಲಿಟಿಕಲ್ ಪಾರ್ಟಿಗಳವರು ಇರುತ್ತಾರೆ. ಅವರು ಏನು ಹೇಳುತ್ತಾರೆ ಅಂದರೆ ನಮ್ಮ ಊರಿಗೆ ಬೇಕು, ನಮ್ಮ ಊರಿಗೆ ಬೇಕು ಎಂದು ಹೇಳುತ್ತಾರೆ. ಯಾರಿಗೆ ಹಂಚುವುದು, ಯಾರಿಗೆ ಬಿಡುವುದು. distribution of houses has become a very big problem. ಎರಡನೆಯದು ಸ್ಯಾಂಕ್ಷನ್ ಅಂಡ್ ಅಲಾಟ್‌ಮೆಂಟ್. ಜಿಲ್ಲಾ ಪರಿಷತ್‌ಗೆ ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಇಷ್ಟು ಆಗಿದೆ ಎಂದು ಪೇಪರ್‌ನಲ್ಲಿ ಸ್ಟೇಟ್‌ಮೆಂಟ್ ಕೊಟ್ಟುಬಿಡುತ್ತೀರಿ. ನಾವು ನಮ್ಮ ಕಾನ್ಸ್‌ಟಿಟ್ಯೂಯೆನ್ಸಿಗೆ ಹೋದ ತಕ್ಷಣ ಜನ ನಮ್ಮನ್ನು ಹಿಡಿದುಕೊಂಡು ಜಿಲ್ಲಾ ಪರಿಷತ್‌ಗೆ ಎಷ್ಟು ಸ್ಯಾಂಕ್ಷನ್ ಆಗಿದೆ, ನಮ್ಮ ಕೂಡ್ಲಿಗಿಗೆ ಎಷ್ಟು ಬಂದಿದೆ ಎಂದು ಕೇಳುತ್ತಾರೆ. ನೀವು ಕೊಡುವ ಲಾಸ್ಟ್ ರಿಪ್ಲೈ ಮಾತ್ರ ಪೇಪರ್‌ಗೆ ಬರುವುದಿಲ್ಲ. ಆದರಲ್ಲಿ ಏನು ಹೇಳುತ್ತೀರಿ ಎಂದರೆ for want of funds works have been with held. It has become a confusion. ಅದು ಯಾಕೆ ಪೇಪರ್‌ನಲ್ಲಿ ಬರುವುದಿಲ್ಲ ? ನಾವು ಏನೆಂದು ಅವರಿಗೆ ರಿಪ್ಲೈ ಕೊಡಬೇಕು ? ಅಸೆಂಬ್ಲಿಯಲ್ಲಿ ಬಂದಾಗ ಹೇಳುತ್ತೀರಿ, ಪೇಪರಿನಲ್ಲಿ ಬಂದರೆ ಅವರೇ ನೋಡಿಕೊಳ್ಳುತ್ತಾರೆ. Confusion has been created here. ಇದಕ್ಕೆ ಉತ್ತರ ಹೇಳುತ್ತೀರಾ ?

SRI M. MOINUDDIN,—Sir, Rs. 4.19 lakhs have been released by the end of October 1987 to Kudligi. This amount has been utilised for the construction of previous series of houses. For 1987-88 all arrangements have been made and the funds will be released shortly. I will be consulting the ZPs with regard to increase in the number of houses to be constructed. They themselves have to decide as to how much each district should get.

ಶ್ರೀ ಕೆ. ವಿ. ರವೀಂದ್ರನಾಥ ಬಾಬು.—ಅದು ನಮಗೆ ಬೇಕಾಗಿಲ್ಲ. ಹುಂಡ್ಕೋ ಬ್ಯಾಂಕ್ ಸ್ಕೀಮ್‌ನಲ್ಲಿ ೫೦ ಪರ್ಸೆಂಟ್ ನಾವು ಕೊಡುತ್ತೇವೆ, ಅವರು ೫೦ ಪರ್ಸೆಂಟ್ ಕೊಡುತ್ತಾರೆ ಎಂದು ಈಗ ತಾನೇ ಮಾನ್ಯ ಪ್ರಕಾಶ್‌ರವರು ಹೇಳಿದರು. If you have paid the money why should

there be delay ! ನೀವು ಏಕೆ ಕೊಡುತ್ತಿಲ್ಲ ? ಏಕೆ ಡಿಲೇ ಆಗಿದೆ ? ಕರೆಸ್ಪಾಂಡೆನ್ಸ್ ಏನು ಮಾಡಿದ್ದೀರಿ ? ಯಾರ ಕಡೆಯಿಂದ ಡಿಲೇ ಆಗಿದೆ ಎಂದು ಹೇಳಬೇಕಲ್ಲ.

ಶ್ರೀ ಮಹಮದ್ ಮೊಯಿನುದ್ದೀನ್.—ಹುಡ್ಕೋ ಸಂಸ್ಥೆ ಸರ್ಕಾರಿ ಸಂಸ್ಥೆ ಆಗಿರುವುದಿಲ್ಲ, ಅದು ಆಟಾನಮಸ್ ಬಾಡಿ ಆಗಿದೆ. ಅವರು ೫೦ ಪರ್ಸೆಂಟ್ ರಿಲೀಸ್ ಮಾಡಿದರೆ ನಾವೂ ೫೦ ಪರ್ಸೆಂಟ್ ರಿಲೀಸ್ ಮಾಡಬೆಕು ಎಂದು ಅಲ್ಲ. ಒಂದು ಯೋಜನೆಯಲ್ಲಿ ಎಷ್ಟು ಕೊಡಬೇಕೆಂದು ಅವರು ರಿಲೀಸ್ ಮಾಡುತ್ತಾರೆ, ಮಿಕ್ಕ ಹಣವನ್ನು ನಮ್ಮ consortium of bank ನಿಂದ ಪಡೆದು ಪೂರ್ತಿ ಹಣವನ್ನು ಒದಗಿಸುತ್ತಿದ್ದೇವೆ.

ಅಧ್ಯಕ್ಷರು.—ಮಾನ್ಯ ಜಿ. ಎಸ್. ಶಿವನಂಜಪ್ಪನವರ ಪ್ರಶ್ನೆಯನ್ನು (ಪ್ರಶ್ನೆ ಸಂಖ್ಯೆ–೬೬೫ (೧೩೭೩), ಮಾನ್ಯ ಸಚಿವರು ಟೈಮ್ ಕೇಳಿರುವುದರಿಂದ ೮–೬–೧೯೮೮ಕ್ಕೆ ಮುಂದೂಡಲಾಗಿದೆ.

ರಾಜ್ಯದಲ್ಲಿ ಜೀತವಿಮುಕ್ತರಿಗಾಗಿ ಕೃಷಿ ಕ್ಷೇತ್ರಗಳು.

೨೨೫೧. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್, ವಕ್ಫ್ ಹಾಗೂ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಜೀತದಾಳುಗಳ ಪುನರ್ ವಸತಿಗಾಗಿ ರಾಜ್ಯದಲ್ಲಿ ಸ್ಥಾಪಿಸಿರುವ ಆಗ್ರಿಕಲ್ಚರಲ್ ಎಸ್ಟೇಟುಗಳ ಸಂಖ್ಯೆ ಎಷ್ಟು ?

ಬಿ) ಸರ್ಕಾರದಲ್ಲಿ ಮೇಲಿನ ಆಗ್ರಿಕಲ್ಚರಲ್ ಎಸ್ಟೇಟ್‌ಗಳಿಗೆ ಜಮೀನು ಒದಗಿಸಲು ಯಾವುದಾದರೂ ಯೋಜನೆ ಇದೆಯೆ ?

ಸಿ) ೧೯೮೬–೮೭ ಮತ್ತು ೧೯೮೭–೮೮ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಜೀತ ವಿಮುಕ್ತರ ಪುನರ್ ವಸತಿಗಾಗಿ ಮಂಜೂರಾದ ಹಣ, ವೆಚ್ಚ ಮಾಡಿದ ಹಣ, ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯ್ತಿ ರಾಜ್ಯ ಮತ್ತು ವಕ್ಫ್ ಸಚಿವರು). —

ಎ) ಎರಡು ಆಗ್ರಿಕಲ್ಚರಲ್ ಎಸ್ಟೇಟುಗಳನ್ನು (ವ್ಯವಸಾಯ ವಸಾಹತು) ಬೆಂಗಳೂರು ಜಿಲ್ಲೆಯ ಬೆಂಗಳೂರು ಉತ್ತರ ತಾಲ್ಲೂಕಿನ ಯಲಹಂಕ ಹೋಬಳಿಯ ಸಂಪಿಗೆಹಳ್ಳಿಯಲ್ಲಿ ಮತ್ತು ಇದೇ ತಾಲ್ಲೂಕಿನ ದಾಸನಪುರ ಹೋಬಳಿ ಲಕ್ಷ್ಮೀಪುರ ಗ್ರಾಮಗಳಲ್ಲಿ ಕ್ರಮವಾಗಿ ೧೮೬–೮೭ನೆ ಮತ್ತು ೧೯೮೫–೮೬ನೇ ಸಾಲುಗಳಲ್ಲಿ ಸ್ಥಾಪಿಸಲಾಗಿರುತ್ತೆ.

ಬಿ) ಇಲ್ಲ, ಜೀತ ವಿಮುಕ್ತರ ಪುನರ್ ವಸತಿ ಯೋಜನೆಯನ್ನು ಕಾರ್ಯಗತ ಮಾಡುತ್ತಿರುವ ಜಿಲ್ಲಾ ಪರಿಷತ್ತುಗಳಿಗೆ ಸಾಧ್ಯವಿರುವ ಕಡೆ ಲಭ್ಯವಿರುವ ಸರ್ಕಾರಿ ಜಮೀನು ಅಥವಾ ಕಮ್ಮಿ ಬೆಲೆಯ ಜಮೀನನ್ನು ಸಾಧ್ಯವಿರುವ ಕಡೆ ಕೊಂಡು ಒದಗಿಸುವಂತೆ ಕೋರಲಾಗಿದೆ.

ಸಿ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಮಂಜೂರು ಮಾಡಿದ ಹಣದ ವೆಚ್ಚ ಮಾಡಿದ ಹಣದ, ಫಲಾನುಭವಿಗಳ ಸಂಖ್ಯೆಯ ವಿವರಗಳು ಈ ಕೆಳಕಂಡಂತೆ ಇರುತ್ತೆ.

	೧೯೮೬–೮೭	೧೯೮೭–೮೮
ಕೇಂದ್ರ ಸರ್ಕಾರದಿಂದ ಮಂಜೂರಾದ ಹಣ	ರೂ. ೧,೯೭, ೮೦೦	ಇಲ್ಲಾ
ವೆಚ್ಚ ಮಾಡಿದ ಹಣ	ರೂ, ೪೫೫.೫೪ ಲಕ್ಷ	೩೯೦.೯೮ ಲಕ್ಷ
ಫಲಾನುಭವಿಗಳ ಸಂಖ್ಯೆ	೭೦೮೫	೬೭೦೫